# ಬೀರಬಲ್ಲನ ಸಮಯಪ್ರಜ್ಞೆ




ಒಮ್ಮೆ ತನ್ನ ಶಯನಾಗೃಹದಲ್ಲಿ ಮಲಗಿದ್ದ ಬಾದಶಹ ಅಕ್ಬರ್ ಮುಂಜಾನೆ ಎದ್ದವನೇ 'ಜೋರಾಗಿ ಕರೆಯಿರಿ.. ಬೇಗನೇ ಕರೆದುತನ್ನಿ' ಎಂದು ಕೂಗಿಕೊಳ್ಳಲಾರಂಭಿಸಿದನು. ಅಲ್ಲಿ ಕಾವಲಿಗಿದ್ದ ಭಟರು ಹೆದರಲಾರಂಭಿಸಿದರು. ಯಾರನ್ನು ಕರೆಯಬೇಕೆಂದು ತೋಚದೆ ಕಂಗಾಲಾದರು. ಆದರೆ ಯಾರನ್ನಾದರೂ ಕರೆತರಲೇಬೇಕು, ಇಲ್ಲದಿದ್ದರೆ ಬಾದಶಹನ ಕೋಪಕ್ಕೆ ತುತ್ತಾಗಿ ಶಿಕ್ಷೆ ಅನುಭವಿಸಬೇಕಾಗುತ್ತಿತ್ತು. ಇಬ್ಬರೂ ಕಾವಲುಭಟರು ಆತಂಕದಿಂದ ಚಡಪಡಿಸತೊಡಗಿದರು. ಆದರೆ ಅಕ್ಬರ್ ಮಾತ್ರ ಹಾಗೇ ಕೂಗುವುದನ್ನು ಮುಂದುವರಿಸಿದನು.

ದಿಕ್ಕುತೋಚದಂತಾದ ಭಟರಿಗೆ ಮೊದಲು ಹೊಳೆದದ್ದು ಬುದ್ಧಿವಂತ ಮಂತ್ರಿ ಬೀರಬಲ್ಲ. ಅವನ ಬಳಿಗೆ ಹೋದರೆ ಯಾವುದಾದರೂ ಒಂದು ಪರಿಹಾರ ಸಿಗುತ್ತದೆಂದು ಕೂಡಲೇ ಅವರು ಬೀರಬಲ್ಲನ ಮನೆಗೆ ತೆರಳಿ ನಡೆದುದೆಲ್ಲವನ್ನೂ ವಿವರಿಸಿದರು. ಬಾದಶಹರು ಕೂಗಿದ ಸ್ಥಳ ಹಾಗೂ ಸಮಯವನ್ನು ಕೇಳಿ ತಿಳಿದ ಬೀರಬಲ್ಲನು 'ಅವರು ಬೆಳಗ್ಗೆ ಎಚ್ಚರವಾದಾಗ ತಮ್ಮ ಮುಖವನ್ನು ಮುಟ್ಟಿಕೊಂಡಿದ್ದಾರೆ. ಆಗ ಅವರಿಗೆ ತಮ್ಮ ಮುಖದ ಮೇಲೆ ಗಡ್ಡ ಬೆಳೆದಿರುವುದು ಗಮನಕ್ಕೆ ಬಂದು ಅದನ್ನು ಸ್ವಚ್ಛಗೊಳಿಸುವವರನ್ನು ಕರೆತರಲು ಕೂಗಿಕೊಂಡಿದ್ದಾರೆ. ಆದ್ದರಿಂದ ನೀವು ಕೂಡಲೇ ಕ್ಷೌರಿಕನನ್ನು ಕರೆದೊಯ್ಯಿರಿ' ಎಂದು ಹೇಳಿದನು. ಬೀರಬಲ್ಲನು ಹೇಳಿದ ಮಾತು ಸರಿಯೆನಿಸಿ ಭಟರು ಆಸ್ಥಾನದ ಕ್ಷೌರಿಕನನ್ನು ಅಕ್ಬರನ ಬಳಿಗೆ ಕರೆದೊಯ್ದರು.

ಕ್ಷೌರಿಕನನ್ನು ಕಂಡ ಅಕ್ಬರನು ಅವನು ಅಲ್ಲಿಗೆ ಬಂದ ವಿಧಾನವನ್ನು ಕೇಳಿತಿಳಿದು, ಬೀರಬಲ್ಲನ ಜಾಣ್ಮೆ ಹಾಗೂ ಸಮಯಪ್ರಜ್ಞೆಯನ್ನು ನೆನೆದು ಮನದಲ್ಲಿಯೇ ಸಂತಸಪಟ್ಟನು

(ಸಂಗ್ರಹ): **ಪ.ನಾ.ಹಳ್ಳಿ.ಹರೀಶ್ ಕುಮಾರ್,**
**ತುಮಕೂರು**

# ಅಜ್ಜನ ಮನೆ



ಅಜ್ಜನ ಮನೆ ಹುಡುಕಿ ಹೊರಟೆ
ಇನ್ನೂ ನನಗೆ ಸಿಕ್ಕಿಲ್ಲ
ಆರು ಕಂಬದ ಮನೆಯೊಳಗೆ
ಅಲ್ಲೇ ಬೆಳೆದಿದ್ದು ನಾವೆಲ್ಲ

ಅಜ್ಜಿ, ಅಮ್ಮ, ಚಿಕ್ಕಮ್ಮ
ಎಲ್ಲರೂ ಒಂದೇ ಮನೆಯೊಳಗೆ
ಅಜ್ಜ, ಅಪ್ಪ, ಚಿಕ್ಕಪ್ಪ
ಭೇದವೆ ಇಲ್ಲ ಅವರೊಳಗೆ

ಸದಾ ತುಂಬಿದ ಉಗ್ರಾಣ
ತೋಟದಿ ಬೆಳೆದ ಧಾನ್ಯ ದವಸ
ಪಡಸಾಲೆಯಲಿ ಸಾಲು ಊಟ
ನಿತ್ಯ ಮುದ್ದೆ, ಸಾರು, ಪಾಯಸ

ಅಜ್ಜನ ಹೆಸರು ಹೇಳುತ ನಾನು
ಹುಡುಕಿದೆ ಎಲ್ಲಾ ಮೂಲೆ, ಮೂಲೆ
ಆರೊ, ಹತ್ತೊ ಮೆಟ್ಟಲು
ಎತ್ತರ ಮನೆಗಳ ಸಾಲೆ ಸಾಲು

ಉತ್ತರ ಯಾರೂ ಕೊಡಲೇ ಇಲ್ಲ
ಮನೆಯ ಅಂಕೆ, ಸಂಖ್ಯೆ ಕೇಳಿದರು
ಅಜ್ಜನ ಹೆಸರು ಹೇಳಿದರೆ
ವ್ಯಂಗ್ಯದ ನಗೆ ಬೀರಿದರು

ಸೋತ ಮುಖದಿ ಹಾಕಿದೆ ಹೆಜ್ಜೆ
ಬಂದ ದಾರಿಗೆ ಸುಂಕವೇ ಇಲ್ಲ
ಅಜ್ಜನ ಮನೆ ಸಿಕ್ಕರೆ
ಪತ್ರವ ಬರೆಯಿರಿ ನೀವೆಲ್ಲ!

**-ಶಿವನಾಪುರ ನರಸಿಂಹಮೂರ್ತಿ,**
**ಕೆಂಗೇರಿ**